ಕಡಿಮೆ ಗೃಹ ನಿರ್ಮಾಣ ಯೋಜನೆಗಳು

2095 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡಿಮೆ ವೆಚ್ಚದ ಗೃಹ ನಿರ್ಮಾಣದ ಯೋಜನೆಗಳನ್ನೇನಾದರೂ ಹಮ್ಮಿಕೊಂಡಿದೆಯೇ?

ಆ) ಹಾಗಿದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವುದು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) 1991-92ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿಯು 10,000 ಮನೆಗಳನ್ನು ಆರ್ಥಿಕವಾಗಿ ಹಿಂದುಳಿದ ಮತ್ತು ಅಲ್ಪ ಆದಾಯ ವರ್ಗದವರಿಗಾಗಿ ಕಟ್ಟುವ ಯೋಜನೆ ಇದೆ. ಮತ್ತು ತಿಪಟೂರಿನಲ್ಲಿ ಬೆಂಕಿ ಅನಾಹುತಕ್ಕೆ ಒಳಗಾದ ಜನರಿಗಾಗಿ 90 ಮನೆಗಳನ್ನು ಕಟ್ಟಲು ಯೋಜನೆ ಹಾಕಿಕೊಂಡಿದೆ. ಇದೇ ಸಾಲಿನಲ್ಲಿ ಹೊಸ ವಸತಿ ಯೋಜನೆಯನ್ವಯ ರಾಜ್ಯ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ (ಬೆಂಗಳೂರುನಗರವನ್ನು ಹೊರತುಪಡಿಸಿ) ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿ 30,000 ಮನೆಗಳನ್ನು ತಲಾ ರೂ.16,000 ಗಳ ವೆಚ್ಚದಲ್ಲಿ ನಿರ್ಮಿಸಲು ಹಾಗೂ ಬೆಂಗಳೂರು ನಗರ ಪ್ರದೇಶಗಳಲ್ಲಿ ಕೊಳಚೆವಾಸಿಗಳಿಗೆ ಪುನರ್‌ವಸತಿ ನಿರ್ಮಿಸಲು ತಲಾ ರೂ. 33,000 ವೆಚ್ಚದಲ್ಲಿ 30,000 ಎಲ್‌ಐಜಿ 2 ಮನೆಗಳನ್ನು ನಿರ್ಮಿಸಲು ಕಾರ್ಯಕ್ರಮ ಹಮ್ಮಿಕ್ಕೊಂಡಿದೆ.

ಬೆಂಗಳೂರು ನಗರಪಾಲಿಕೆಗೆ ಹೊಸದಾಗಿ ಸೇರಿದ ಬಡಾವಣೆಗಳ ಸಂಖ್ಯೆ

1824 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರಪಾಲಿಕೆಗೆ ಹೊಸದಾಗಿ ಸೇರಿಸಿಕೊಂಡ ಬಡಾವಣೆಗಳೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿಸಚಿವರು)

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ 89 ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಕೊಡಲು ಸಂಖ್ಯೆ ವನಇ 338 ಎಂಎನ್‌ಎಕ್ಸ್ 89 ದಿನಾಂಕ 24-7-91ರಂದು ಅಧಿಸೂಚನೆಯಲ್ಲಿ ಹೊರಡಿಸಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಮೇಲ್ಕಂಡ ಬಡಾವಣೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

ರಾಜ್ಯದ ಪುರಸಭೆಗಳ ವರಮಾನ

2121 ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪುರಸಭೆಗಳ ವರಮಾನದ ಬಗ್ಗೆ ಸರ್ಕಾರವು ವಿಶೇಷವಾಗಿ ಚಿಂತಿಸಿದೆಯೇ

ಆ) ಅನೇಕ ಪುರಸಭೆಗಳು ಸಾಕಷ್ಟು ವರಮಾನವಿಲ್ಲದೇ ನಾಗರೀಕರಿಗೆ ಕನಿಷ್ಠ ಸವಲತ್ತುಗಳನ್ನು ಕೂಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇಂತಹ ಪುರಸಭೆಗಳಿಗೆ ಸರ್ಕಾರದವರು ಹಣ ಸಂದಾಯವನ್ನು ಮಾಡಲಾಗಿದೆಯೇ.

ಈ) ಈ ಪುರಸಭೆಗಳಿಗೆ ವಿಶೇಷವಾದಂತಹ ಅನುದಾನವನ್ನು ಸರ್ಕಾರವು ನೀಡಲು ನಿರ್ಧರಿಸಿದೆಯೇ.

ಉ) ಪುರಸಭೆಗಳ ವರಮಾನವನ್ನು ಹೆಚ್ಚಿಸಿಕೊಳ್ಳಲು ಸರ್ಕಾರವು ಏನೇನು ಸೂಚನೆಗಳನ್ನು ನೀಡಿದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಜಕಾತಿ ಅನುದಾನ ಹೊರತುಪಡಿಸಿ ಪ್ರತಿ ವರ್ಷ ಅಭಿವೃದ್ಧಿ ನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಉ) ಕಾಯಿದೆ ಪ್ರಕಾರ ಆದಷ್ಟು ಹೆಚ್ಚಿನ ತೆರಿಗೆಗಳನ್ನು ವಿಧಿಸಲು ಸೂಚಿಸಿದೆ. ಹಾಗೂ ಜಕಾತಿ ಪುನಃ ವಿಧಿಸಲು ಅಥವಾ ಪ್ರವೇಶ ತೆರಿಗೆಯು ಹೆಚ್ಚಿನ ಸಾಮಾಗ್ರಿಗಳ ಮೇಲೆ ಹಾಕಲು ಸರ್ಕಾರ ಪರಿಶೀಲಿಸುತ್ತಿದೆ.

ಕುಮುಟಾ ಹೊನ್ನಾವರ ಕುಡಿಯುವ ನೀರಿನ ಯೋಜನೆ

2120 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮುಟಾ-ಹೊನ್ನಾವರ ನಗರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭಿಸುವ ಸಲುವಾಗಿ ಎಂದು ಅಡಿಗಲ್ಲನ್ನು ಇರಿಸಲಾಯಿತು.

ಆ) ಈ ಯೋಜನೆ ಪ್ರಾರಂಭವಾಗಿನಿಂದ ಇಲ್ಲಿಯವರೆವಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.

ಇ) ಈ ಯೋಜನೆ ಈಗ ಯಾವಹಂತದಲ್ಲಿದೆ.

ಈ) ಈ ಮೇಲ್ಕಂಡ ಎರಡೂ ನಗರಗಳಲ್ಲಿ ಕುಡಿಯುವ ನೀರಿನ ತೀವ್ರವಾದ ಅಭಾವವಿರುವುದರಿಂದ ಮೇಲ್ಕಂಡ ಯೋಜನೆಯನ್ನು ತ್ವರಿತಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಕುಮಟಾ ನಗರದ ಕುಡಿಯುವ ನೀರಿನ ಯೋಜನೆಗೆ ದಿನಾಂಕ 24.1.91ರಂದು ಶಂಕುಸ್ಥಾಪನೆಯನ್ನು ಮಾಡಲಾಯಿತು.

ಆ) ಇದುವರೆವಿಗೂ ಈ ಯೋಜನೆಗೆ ರೂ.22,683.00ಗಳನ್ನು ಖರ್ಚು ಮಾಡಲಾಗಿದೆ.

ಇ) 1. ಸಂತಗಲ್‌ದಿಂದ ಕುಮಟಾ ಪಟ್ಟಣದವರೆಗೆ ಪಿ.ಎಸ್.ಸಿ.ಶುದ್ಧ ನೀರಿನ ಗ್ರಾವಿಟಿ ಕೊಳವೆ ಮಾರ್ಗಗಳನ್ನು ಹಾಕಲು ಗುತ್ತಿಗೆದಾರವನ್ನು ನೇಮಿಸಲಾಗಿದೆ. ಶೀಘ್ರದಲ್ಲಿ ಕೆಲಸ ತೆಗೆದುಕೊಳ್ಳಲು ಆಜ್ಞೆ ನೀಡಲಾಗುವುದು.

2. ಮೂಲ ಸ್ಥಾವರದ ಕೆಲಸಗಳಿಗೆ ಹಾಗೂ ಜಲ ಶುದ್ಧೀಕರಣ ಘಟಕದ ಕೆಲಸ ಪೂರೈಸಲು ಟೆಂಡರ್‌ಗಳನ್ನು ಕರೆಯಲಾಗಿದೆ.

ಈ) ಹೌದು.